ದಿಃ 23-02-2023 ರಂದು ಪ್ರಾಸಾ 1 ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

ಮುಂದುವರಿದ ಮುಖ್ಯವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ.

ನ್ಯಾಯಾಲಯದ ಮುಂದಿರುವ 2 ಉದ್ದನೆಯ ರೀಪುಗಳು, 1 ಚೌಕ ರೀಪು, ಹಾಗೂ ಪ್ಲೈವುಡನ 2 ಸಣ್ಣ ತುಕಡಿಗಳು ಮತ್ತು ಕೊಡ್ಲಿ ಇವುಗಳನ್ನು ಮುದ್ದೆಮಾಲು-1 ರಿಂದ 6 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಸಾಕ್ಷಿ ಗುರುತಿಸುತ್ತಾರೆ.

ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಬಿ ಕೆ ಡಿ ವಕೀಲರಿಂದ

ನಮ್ಮ ಮದುವೆ ಯಾವ ಇಸವಿಯಲ್ಲಿ ಆಯಿತು ಎಂದು ನೆನಪಿಲ್ಲ. ನಮ್ಮ ಮದುವೆಗೆ ನನ್ನ ಅತ್ತೆ ಮಾವ ಬಂದಿರಲಿಲ್ಲ. ನಮ್ಮ ಮದುವೆ ಬುತ್ತಿ ಬಸವೇಶ್ವರ ದೇವಾಲಯ, ಕುಷ್ಟಗಿಯಲ್ಲಿ ಆಯಿತು. ನಾನು ಎಸ್ ಎಸ್ ಎಲ್ ಸಿ ವರೆಗೆ ಓದಿದ್ದೇನೆ. ದೂರನ್ನು ನಾನು ತಯಾರಿಸಿಕೊಂಡು ಹೋಗಿ ಪೊಲೀಸರಿಗೆ ಕೊಟ್ಟೆ. ನನಗೆ ಇಬ್ಬರು ಮಕ್ಕಳು. ನನ್ನ ಮಗ ಸೃಜನ ಹನುಮನಾಳ ಶಾಲೆಯಲ್ಲಿ 1ನೇ ತರಗತಿ ಓದಿದ್ದ. ಮಗಳೂ ಸಹಾ ಅಲ್ಲೇ ಓದುತ್ತಿದ್ದಳು. ಆರೋಪಿತರ ಊರು ಮತ್ತು ತವರುಊರು ಒಂದೇ ಊರು. ನಮ್ಮ ತಂದೆ-ತಾಯಿಗೆ ನಾವು 3 ಜನ ಮಕ್ಕಳು. ಕುಮಾರ ನನ್ನ ತಮ್ಮ. ಆತ ಪೊಲೀಸ ಇಲಾಖೆಯಲ್ಲಿ ಇದ್ದಾನೆ. ನನ್ನ ತಮ್ಮ ಬಸವರಾಜ ಹೊಲ ಮನೆ ಕೆಲಸ ಮಾಡುತ್ತಾನೆ. ಗಂಗಪ್ಪ ಮತ್ತು ಮಹೇಶ ನಮ್ಮ ಪಕ್ಕದ ಮನೆಯವರು. ಅವರು ನನ್ನ ಸಹೋದರನ ಸ್ನೇಹಿತರು ಎಂದರೆ ಸರಿಯಲ್ಲ.

ನಾನು ನನ್ನ ಗಂಡನ ವಿರುದ್ದ ಜೀವನಾಂಶ ಕೋರಿ ಅರ್ಜಿ ಸಲ್ಲಿಸಿದ್ದೆ. ಅದೇ ರೀತಿ ಕುಷ್ಟಗಿ ನ್ಯಾಯಾಲಯದಲ್ಲಿ ಪಾಲು ವಿಭಾಗ ಕೋರಿ ಕೇಸು ಹಾಕಿದ್ದೇನೆ. ನನ್ನ ಗಂಡ ನನ್ನ ತಂದೆ, ತಮ್ಮನ ವಿರುದ್ದ ಕೇಸು ಹಾಕಿದ್ದಾರೆ ಎಂದರೆ ಸರಿ. ಈ ಗಲಾಟೆಯಾದ ನಂತರದಿಂದ ನಾನು ಬೇರೆ ಮನೆ ಮಾಡಿಕೊಂಡಿದ್ದೇನೆ. ನನ್ನ ಸಹೋದರ ಸಹಾ ಅದೇ ಊರಿನಲ್ಲಿದ್ದಾರೆ. ವರದಕ್ಷಿಣೆ ಕಿರುಕುಳದ ಬಗ್ಗೆ ಗುರುಹಿರಿಯರಿಗೆ ಹೇಳಿದ್ದೆ. ಆ ಬಗ್ಗೆ ದೂರನ್ನು ಕೊಟ್ಟಿರಲಿಲ್ಲ. ವಿಚ್ಛೇದನದ ನೋಟೀಸು ಕೊಟ್ಟಿಲ್ಲ. ದಿಃ 8-8-2016 ರಂದು ಮದ್ಯಾಹ್ನ 12 ಗಂಟೆಗೆ ನನ್ನ ಅತ್ತೆ ಮಾವ, ಗಂಡ, ನಾದಿನಿ, ಇಬ್ಬರು ಮಕ್ಕಳು ಮತ್ತು ನಾನು ಇದ್ದೇವು. ಮಹೇಶ ತಂದೆ ಭೀಮೇಶ, ಗಂಗಪ್ಪ, ರಂಗಪ್ಪ, ಬಸವರಾಜ ಇವರು 4-5 ಮಂದಿ ಬಿಡಿಸಿದರು. ಇವರನ್ನು ಹೊರತುಪಡಿಸಿ ಬೇರೆಯವರು ಇದ್ದರು ಆದರೆ ಮುಂದೆ ಬರಲಿಲ್ಲ. ಜಗಳ ಮದ್ಯಾಹ್ನ

12 ಗಂಟೆಗೆ ಶುರುವಾಯಿತು. ಮದ್ಯಾಹ್ನ 3-30 ಗಂಟೆಗೆ ಮುಗಿಯಿತು.

ನಾನು ದೂರಿನಲ್ಲಿ ಮದ್ಯಾಹ್ನ 3-30 ಗಂಟೆಯವರೆಗೆ ಜಗಳ ಆಯಿತು ಎಂದು ಬರೆಸಿದ್ದೇನೆ. ನನ್ನ ಕೈಗೆ ಗಾಯಗಳಾಗಿತ್ತು. ಸರ್ಕಾರಿ ಆಸ್ಪತ್ರೆಗೆ ಅದೇ ದಿನ ಹೋಗಿದ್ದೆ, ಅದೇ ದಿನ ಠಾಣೆಗೆ ಕಳಿಸಿದರು. ಆಸ್ಪತ್ರೆಗೆ 8 ಗಂಟೆಗೆ ಹೋಗಿ ತೋರಿಸಿ ವಾಪಸ್ ಠಾಣೆಗೆ ಹೋದೆವು. ನಮ್ಮ ಮನೆಯ ಬಾಗಿಲು ಪೂರ್ವ ದಿಕ್ಕಿಗೆ ಇದೆ. ಪಶ್ಚಿಮಕ್ಕೆ -ಶೇಖರಪ್ಪ, ಉತ್ತರಕ್ಕೆ - ಹೇಮಣ್ಣ, ದಕ್ಷಿಣಕ್ಕೆ - ರಸ್ತೆ ಇದೆ. ರಾಮಚಂದ್ರಪ್ಪ ಎಡಗಾಲಿನಿಂದ ಒದ್ದರು, ಸಾರ್ವಜನಿಕರು ನೋಡಿದ್ದರೋ ಇಲ್ಲವೋ ಗೊತ್ತಿಲ್ಲ. 1 ನೇ ಆರೋಪಿ ಅನಸೂಯ ಅವಳ ಮದುವೆಯಾಗಿದೆ, ಅವಳನ್ನು ಇಳಕಲ್ಲ ತಾಲ್ಲೂಕಿನ ನಂದವಾಡಗಿ ಗ್ರಾಮಕ್ಕೆ ಕೊಟ್ಟಿದ್ದಾರೆ ಎಂದರೆ ಸರಿ. ನಾನು ವರ್ಷಕ್ಕೆ, 6 ತಿಂಗಳಿಗೊಮ್ಮೆ ಹೇಳಿಕೆಯನ್ನು ಕೊಟ್ಟಿದ್ದೇನೆ. ಪಂಚನಾಮೆಯನ್ನು ದಿಃ 9-8-2016 ರಂದು ಮಾಡಿದ್ದಾರೆ. ಪಂಚನಾಮೆಯನ್ನು ನಾನು ಹೇಳಿ ಬರೆಸಿದ್ದೇನೆ. ಎಷ್ಟು ಸಹಿ ಮಾಡಿದ್ದೇನೆ ಎಂದು ನೆನಪಿಲ್ಲ. ನಾನು ಈವರೆಗೆ ಫೈಲನ್ನು ಓದಿಕೊಂಡಿದ್ದೆ, ನನ್ನ ಸಹೋದರ ಸಹಾ ಬಂದಿದ್ದಾನೆ.

ಮೊದಲು ನನ್ನ ನಾದಿನಿ ನನ್ನ ಕೂದಲು ಹಿಡಿದು ಎಳೆದಳು, ನಂತರ ನಮ್ಮ ಅತ್ತೆ ಕೂದಲು ಹಿಡಿದು ಎಳೆದರು, ಅದನ್ನು ಯಾರೂ ನೋಡಿಲ್ಲ. ಕೊಡ್ಲಿ ತೆಗೆದುಕೊಂಡು ಹೊಡೆಯಲು ಬಂದಿದ್ದನ್ನು ಎಲ್ಲರೂ ಅಂದರೆ ಊರಿನ ಜನರು ನೋಡಿದ್ದಾರೆ. ಕೊಡಲಿಯಿಂದ ಹೊಡೆಯಲು ಬಂದಾಗ ಸಮಯ ಮದ್ಯಾಹ್ನ 12 ಗಂಟೆಯಾಗಿತ್ತು. ನಾನು ಆಗ ಗಂಡನ ಮನೆಯಲ್ಲಿ ಇದ್ದೆ. ನಾನು ತವರುಮನೆಗೆ ಹೋಗಿರಲಿಲ್ಲ. ಜೀವನಾಂಶದ ಕೇಸು ಹಾಕಿದಾಗ ನಾನು ತವರುಮನೆಯಲ್ಲಿದ್ದೆ ಹಿರಿಯರು ಗಂಡನ ಮನೆಗೆ ಕರೆದುಕೊಂಡು ಹೋಗಿದ್ದರು. ನ್ಯಾಯಾಲಯದ ಮುಂದಿರುವ ಕೊಡಲಿಯನ್ನು ಮೊದಲು ನಮ್ಮ ಮನೆಯಲ್ಲಿ ನೋಡಿದ್ದು ನಂತರದಲ್ಲಿ ಈಗಲೇ ನೋಡುತ್ತಿರುವುದು.

ಪಂಚನಾಮೆಯನ್ನು ಪೊಲೀಸರು ಬರೆದಿದ್ದು ಅವರ ಹೆಸರು ಗೊತ್ತಿಲ್ಲ. ಮುಂಜಾನೆ 9 ರಿಂದ 11-30 ಗಂಟೆಯವರೆಗೆ ಪಂಚನಾಮೆ ಮಾಡಿದರು, ಅದರಲ್ಲಿ ಬರೆದ ವಿಷಯ ಗೊತ್ತಿಲ್ಲ. ದೂರನ್ನು ಓದಿ ಸಹಿ ಮಾಡಿಲ್ಲ. 1 ನೇ ಆರೋಪಿ ನನಗೆ ಕೊಡ್ಲಿಯಿಂದ ಹೊಡೆದಿಲ್ಲ ಎಂದರೆ ಸರಿಯಲ್ಲ, ನನ್ನ ಯಜಮಾನ ನನ್ನ ತಂದೆ-ತಮ್ಮನ ವಿರುದ್ಧ ಕೇಸನ್ನು ಹಾಕಿದ್ದು ಅದು ರಾಜಿಯಾಗದೇ ಇದ್ದುದರಿಂದ ಈ ಸುಳ್ಳು

ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ, ನನ್ನ ಸಹೋದರ ಪೊಲೀಸ ಆಗಿರುವುದರಿಂದ ಆತನ ಪ್ರಭಾವದಿಂದ ಈ ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ಸುಳ್ಳು ಕೇಸು ಹಾಕಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆ ದಿನ ನನಗೆ ಯಾವುದೇ ಗಾಯಗಳಾಗಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಉಕ್ತ ಉಲ್ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ಶ್ರೀಮತಿ ಬಿ ಎಸ್ ರೇಖಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ